ನಾಂದಿಪದ

# ಈಚಿನ ಕನ್ನಡ ಕಾವ್ಯ

**ಕಾ**ವ್ಯ ಭಾಷೆಯೊಂದರ ದಿಕ್ಸೂಚಿ, ಅದರ ಸಾರ. ಒಂದು ಭಾಷೆಯಲ್ಲಿ ಉತ್ತಮ ಕಾವ್ಯ ಸೃಷ್ಟಿಯಾಗುತ್ತಿದ್ದರೆ ಅದು ಜೀವಂತವಾಗಿದೆ ಎಂದು ಅರ್ಥ. ಕನ್ನಡದ ಹಿಂದಿನ ಕವಿಗಳು ಸೃಷ್ಟಿಸಿದ ಮನುಕುಲದ ಹಾಡುಗಳು ಈಗಲೂ ನಮ್ಮಲ್ಲಿ ಪುಲಕದ ಅಲೆಗಳನ್ನು ಎಬ್ಬಿಸುತ್ತಿವೆ. ಆಧುನಿಕ ಕನ್ನಡ ಕಾವ್ಯದಲ್ಲಿ ಹೊಸ ಮಾತಿಗಾಗಿ, ಶೈಲಿಗಾಗಿ ಹುಡುಕಾಡಿದ್ದನ್ನು, ಅಲ್ಲಿ ಆದ ಪ್ರಯೋಗಗಳನ್ನು ನೋಡಬಹುದು. ದ.ರಾ. ಬೇಂದ್ರೆ ಅವರ ನಂತರ ಗೋಪಾಲಕೃಷ್ಣ ಅಡಿಗರ ಕಾವ್ಯ ಹೊಸಪಾಕದಲ್ಲಿ ಮೂಡಿಬಂತು. ಹಾಗೇ ವಿ.ಜಿ. ಭಟ್ಟರ ತುಂಟ ಕಾವ್ಯ, ಗಂಗಾಧರ ಚಿತ್ತಾಲ, ಕೆ.ವಿ. ತಿರುಮಲೇಶ್‌ರ ಕಾವ್ಯ ನಮ್ಮಲ್ಲಿ ತಮ್ಮದೇ ಜಾಗಗಳನ್ನು ಪಡೆದಿವೆ.

ಇತ್ತೀಚಿನ ಕನ್ನಡ ಕಾವ್ಯ ಕಾಲವೆಂಬ ಮೊಲದೊಂದಿಗೆ ಸ್ಪರ್ಧೆಯಲ್ಲಿರುವ ಆಮೆಯಂತೆ ಕಾಣುತ್ತದೆ. ಆಮೆ ಗುರಿ ಮುಟ್ಟುತ್ತದೆ ಎಂದು ಅಂದುಕೊಂಡರೂ ಅದು ಹಾಗೆ ಆಗುವುದು ಅನುಮಾನ. ಈಗ ಕೆಲವು ರಮ್ಯ, ಗಿಲೀಟಿನ ಸಾಲುಗಳನ್ನು ಬರೆದರೆ ಅದೇ ಕವಿತೆ. ಜೊತೆಗೆ ಕಾವ್ಯದ ಹೆಸರಿನಲ್ಲಿ ಪುರಾಣ, ವಚನ, ಇತಿಹಾಸ, ರಾಮಾಯಣ, ಮಹಾಭಾರತವನ್ನು ಪುನರ್‌ಸೃಷ್ಟಿಸುವ ಗುಡಿಕೈಗಾರಿಕೆಯೂ ಇದೆ. ಇವೆಲ್ಲದಕ್ಕೆ ಸರ್ಕಾರಿ ಪೋಷಿತ ಅಕಾಡೆಮಿಗಳು, ಖಾಸಗಿ ಸಂಸ್ಥೆಗಳು ಕೊಡುವ ಪ್ರಶಸ್ತಿಗಳ ಉದಾರ ಪ್ರೋತ್ಸಾಹವಿದೆ. ಅದು ಅಷ್ಟಕ್ಕೇ ಸೀಮಿತ. ಕವಿತೆಯ ಓದು ಯಾರಿಗೂ ಬೇಡವಾಗಿದೆ. ಇದು ಒಂದು ರೀತಿ ಬಡ ಜನರ ತರಹ. ಅವರ ಬಗ್ಗೆ ಎಲ್ಲರೂ ಮಾತನಾಡುತ್ತಾರೆ; ಆ ಭಾವಲೋಕದ ಸೂಕ್ಷ್ಮ ಜೀವಿಗಳೊಂದಿಗೆ ಒಡನಾಟ, ಸಹಬಾಳ್ವೆ ಬೇಕಿಲ್ಲ. ಕವಿಗಳೂ ತಮಗೆ ಅನ್ನಿಸಿದ್ದನ್ನೆಲ್ಲ ಬರೆದು ಪ್ರಕಟಿಸುತ್ತಾರೆ. ಇಲ್ಲವೇ ಪತ್ರಿಕೆಗಳಿಗೆ ಹೊತ್ತು ಹಾಕುತ್ತಾರೆ. ಅಲ್ಲಿಂದ ಅವು ತಾಯನ್ನಗಲಿದ ಕರುವಿನಂತೆ ಮರಳಿ ಮೂಲದೆಡೆಗೆ ಹೋಗುತ್ತವೆ. ಇದರಿಂದ ಶಾನೆ ನೊಂದುಕೊಳ್ಳುವವರು ಕವಿಗಳು; ಓದುಗರಲ್ಲ! ಈಗಂತೂ ಓದುಗರು ಹಾವು, ಚೇಳು ಕಂಡ ಹಾದಿಗರಂತೆ ಹೊಸ ಕವಿಪುಂಗವರ ಸಾಹಿತ್ಯದಿಂದ ಮಾರು ದೂರ ಓಡುತ್ತಿದ್ದಾರೆ! ಕೆಲವು ನಾಮಾಂಕಿತ, ಬಿರುದಾಂಕಿತ, ಶಿಷ್ಯಾಲಂಕೃತ ಕವಿಗಳ ರಚನೆಗಳೂ ಇದರಿಂದ ಹೊರತಲ್ಲ.

ಕಾವ್ಯ ಮುಂದಕ್ಕೆ ಹರಿಯದೆ ಮಲೆತು ನಿಂತ ನೀರಿನಂತಿದೆ ಎಂಬುದನ್ನು ವಿಮರ್ಶಕರೂ ಸ್ಪಷ್ಟ ಮಾತುಗಳಲ್ಲಿ ಹೇಳುತ್ತಿಲ್ಲ. ಅವರು ಕವನಸಂಕಲನಗಳಿಗೆ ಜೈಜೈ ಎಂದು ಮುನ್ನುಡಿ, ವಿಮರ್ಶೆ ಬರೆಯುತ್ತ, ಸೆಮಿನಾರುಗಳಲ್ಲಿ ಕು.ವೆಂ.ಪು., ಬೇಂದ್ರೆ, ನರಸಿಂಹಸ್ವಾಮಿ, ಕಂಬಾರ, ಶಿವಪ್ರಕಾಶ್, ಸಿದ್ಧಲಿಂಗಯ್ಯ ಅವರ ಕಾವ್ಯದ ಬಗ್ಗೆ ಮಾತನಾಡುತ್ತ ಆರಾಮಾಗಿದ್ದಾರೆ. ತಮ್ಮ ಅದೇಅದೇ ಪ್ರವಚನವನ್ನು ಸಂದರ್ಭ, ಸನ್ನಿವೇಶಕ್ಕೆ ತಕ್ಕಂತೆ ಬದಲಿಸುತ್ತ ಮುಂದುವರಿಸುತ್ತಿದ್ದಾರೆ. ಇತ್ತೀಚಿನ ಕಾವ್ಯದಲ್ಲಿ ಮನವನ್ನು ಸೆರೆಹಿಡಿಯುವ ಭಾಷೆಗಾಗಿ, ಕುಣಿಸುವ ಲಯಕ್ಕಾಗಿ, ಪ್ರತಿಮೆ, ರೂಪಕ, ಚಿತ್ರಗಳಿಗಾಗಿ ಹುಡುಕಾಡಿದರೆ ನಿರಾಶೆಯಾಗುತ್ತದೆ. ಅಂದಹಾಗೆ, ಈ ಕಾಲಮಾನದ ಸಂವೇದನೆಯನ್ನು ಹೊಸ ನುಡಿಗಟ್ಟಿನಲ್ಲಿ ಹಿಡಿಯದಿರುವ ಕಾವ್ಯ ಬರದಿರುವುದಕ್ಕೆ ಈಗಿನ ಕವಿಗಳ ಅಂತರಂಗದ ಸಂಪತ್ತು ಬರಿದಾಗಿರುವುದು ಕಾರಣವಿರಬಹುದೆ?

**ಸಂದೀಪ ನಾಯಕ**

